**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 04 ಕತವ 2019

ಕರ್ನಾಟಕ ಸರ್ಕಾರ ಸಚಿವಾಲಯ
ಕೊಠಡಿ ಸಂಖ್ಯೆ.614, 1ನೇ ಗೇಟ್
6ನೇ ಮಹಡಿ, ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ13/02/2019

**ಅನಧಿಕೃತ ಟಿಪ್ಪಣಿ**

**ವಿಷಯ:** ವಿಶೇಷ ಚೇತನ (ಅಂಗವಿಕಲ) ಸಿಬ್ಬಂದಿಗಳಿಗೆ ಮಿದು ಫ್ಲೆಕ್ಸಿ) ಸಮಯ ಸೌಲಭ್ಯದ ಕುರಿತು.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 04 ಕತವ 2019, ದಿನಾಂಕ:08/02/2019

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. " ವಿಶೇಷ ಚೇತನ (ಅಂಗವಿಕಲ) ಸಿಬ್ಬಂದಿಗಳಿಗೆ ಮಿದು ಫ್ಲೆಕ್ಸಿ ಸಮಯ ಸೌಲಭ್ಯ ನೀಡಿರುವ ಕುರಿತು" ಆದೇಶವನ್ನು ತಮ್ಮ ಅಧೀನದಲ್ಲಿ ಬರುವ ಎಲ್ಲಾ ಇಲಾಖೆಯಲ್ಲಿ ಪ್ರಚುರ ಪಡಿಸುವ ಬಗ್ಗೆ ಇಲಾಖಾ ಮುಖ್ಯಸ್ಥರುಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ತಮ್ಮನ್ನು ಈ ಮೂಲಕ ಕೋರಲಾಗಿದೆ.

13/2/19

**(ಕೆ. ರವೀಂದ್ರ)**
**ಸರ್ಕಾರದ ಅಧೀನ ಕಾರ್ಯದರ್ಶಿ**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ**
**(ಆಸು-ತಪಾಸಣೆ)**

13/2/19

ಗೆ:
ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ/ಕಾರ್ಯದರ್ಶಿಗಳು

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ವಿಶೇಷ ಚೇತನ (ಅಂಗವಿಕಲ) ಸಿಬ್ಬಂದಿಗಳಿಗೆ ಮಿದು (ಫ್ಲೆಕ್ಸಿ) ಸಮಯ ಸೌಲಭ್ಯದ ಬಗ್ಗೆ.

****

**ಪ್ರಸ್ತಾವನೆ:** ಕಾರ್ಯನಿರ್ವಹಿಸುತ್ತಿರುವ ವಿಶೇಷ

6ನೇ ರಾಜ್ಯ ವೇತನ ಆಯೋಗವು ಎಲ್ಲಾ ವಿಧದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತೊಂದರೆಗಳನ್ನು
ಚೇತನ (ಅಂಗವಿಕಲ) ಸಿಬ್ಬಂದಿಗಳು ಕಚೇರಿಗೆ ಬಂದು ಹೋಗಲು ಎದುರಿಸುತ್ತಿರುವ ಅವರುಗಳು ಭೋಜನದ
ಗಮನದಲ್ಲಿರಿಸಿ, ಆಯೋಗವು ವಿಶೇಷ ಚೇತನ (ಅಂಗವಿಕಲ) ಸಿಬ್ಬಂದಿಗಳಿಗೆ ಷರತ್ತಿಗೊಳಪಟ್ಟು, ವಿಶೇಷ
ಸಮಯದಲ್ಲಿ ಮತ್ತು ಕಚೇರಿಯ ವೇಳೆಯ ನಂತರವೂ ಕರ್ತವ್ಯ ನಿರ್ವಹಿಸುವ ಕೆಲಸಕ್ಕೆ ಹಾಜರಾಗಲು
ಚೇತನ ಸಿಬ್ಬಂದಿಗಳು ನಿಗದಿತ ಕಚೇರಿ ವೇಳೆಗಿಂತ ಒಂದು ಗಂಟೆ ತಡವಾಗಿ ಮೇಲ್ಕಂಡ
ಅನುಮತಿಸುವಂತೆ ಆಯೋಗವು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ. 6ನೇ ವೇತನ ಆಯೋಗದ ವಿಶೇಷ ಚೇತನ
ಶಿಫಾರಸ್ಸನ್ನು ಸಚಿವ ಸಂಪುಟ ಸಭೆಯಲ್ಲಿ ಪರಿಶೀಲಿಸಿ, ನಿರ್ಣಯ ಕೈಗೊಂಡಿದ್ದು, ಅದರಂತೆ
(ಅಂಗವಿಕಲ) ಸಿಬ್ಬಂದಿಗಳಿಗೆ ಮಿದು (ಫ್ಲೆಕ್ಸಿ) ಸಮಯವನ್ನು ಜಾರಿಗೊಳಿಸಲು ನಿರ್ಧರಿಸಲಾಗಿರುತ್ತದೆ.
ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶದ ಸಂಖ್ಯೆ: ಸಿಆಸುಇ 04 ಕತವ 2019**

**ಬೆಂಗಳೂರು, ದಿನಾಂಕ: 08.02.2019**

ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ವಿವಿಧ ವೃಂದ ಮತ್ತು ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಶೇಷ ಚೇತನ (ಅಂಗವಿಕಲ)ಸಿಬ್ಬಂದಿಗಳಿಗೆ ದಿನಾಂಕ:01.02.2019 ರಿಂದ ಜಾರಿಗೆ ಬರುವಂತೆ ಅವರುಗಳು ಭೋಜನ ಸಮಯದಲ್ಲಿ ಮತ್ತು ಕಚೇರಿಯ ವೇಳೆಯ ನಂತರವೂ ಕತ್ರವ್ಯ ನಿರ್ವಹಿಸುವ ಷರತ್ತಿಗೊಳಪಟ್ಟು ನಿಗದಿತ ಕಚೇರಿ ವೇಳೆಗಿಂತ ಒಂದು ಗಂಟೆ ತಡವಾಗಿ ಕರ್ತವ್ಯಕ್ಕೆ ಹಾಜರಾಗಲು ಮಿದು ಸಮಯವನ್ನು (ಫ್ಲೆಕ್ಸಿ) ಜಾರಿಗೆ ತರಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

8/2/19

(ಕೆ.ರವೀಂದ್ರ)
**ಸರ್ಕಾರದ ಅಧೀನ ಕಾರ್ಯದರ್ಶಿ**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ**
(ಆಡಳಿತ ಸುಧಾರಣೆ–ತಪಾಸಣೆ)

8/2/19

**ಗೆ,**

1. ಸರ್ಕಾರದ ಎಲ್ಲಾ ಅಪರ ಮುಖ್ಯ/ಪ್ರಧಾನ/ಕಾರ್ಯದರ್ಶಿಗಳು
2. ಸರ್ಕಾರದ ಎಲ್ಲಾ ವಿಶೇಷ/ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು ಮತ್ತು ಶಾಖಾಧಿಕಾರಿಗಳು
3. ರಾಜ್ಯದ ಎಲ್ಲಾ ಇಲಾಖೆಗಳ ಮುಖ್ಯಸ್ಥರುಗಳು ಹಾಗೂ ಸಮನ್ವಯಾಧಿಕಾರಿಗಳು ಮತ್ತು ಸಮಾನಾಂತರ ಹುದ್ದೆಯ ಅಧಿಕಾರಿಗಳು